KARN220033742021

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.**

**ಉಪಸ್ಥಿತರು: ಶ್ರೀ ಮಹೇಂದ್ರ ಎಂ.,** ಬಿ.ಎ ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**ದಿನಾಂಕಃ 10 ನೇ ಫೆಬ್ರವರಿ-2023**

**ಓ.ಎಸ್.ನಂ.175/2021**

ವಾದಿಗಳು ಃ ಶ್ರೀಮತಿ ಹಯಾತ್ ಖಾತುನ್ ಮತ್ತು ಇನ್ನೊಬ್ಬರು.

-ವಿರುದ್ಧ-

ಪ್ರತಿವಾದಿಗಳು ಃ ಶ್ರೀ.ಫಜಲ್ ಉಲ್ಲಾ ಖಾನ್ ಮತ್ತು ಇತರರು.

**ಮಧ್ಯಂತರ ಅರ್ಜಿ ಸಂಖ್ಯೆಃ 2**

ವಾದಿಗಳು / ಅರ್ಜಿದಾರರುಃ

1. ಶ್ರೀಮತಿ. ಹಯಾತ್ ಖಾತುನ್,
ಕೋಂ. ಲೇಟ್ ಅಹಮ್ಮದ್ ಆಲಿ ಖಾನ್,
ವಯಸ್ಸುಃ 85 ವರ್ಷ,

2. ಶ್ರೀ.ಇಲಿಯಾಜ್ ಆಲಿ ಖಾನ್
ಬಿನ್. ಲೇಟ್ ಅಹಮ್ಮದ್ ಆಲಿ ಖಾನ್,
ವಯಸ್ಸು 55 ವರ್ಷ,

ಇಬ್ಬರ ವಾಸಃ ಹೊಂಗನೂರು ಗ್ರಾಮ,
ಹೊಂಗನೂರು ಅಂಚೆ,
ಕಸಬಾ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ.ಹೆಚ್.ಕೆ., ವಕೀಲರು)

-ವಿರುದ್ಧ-

<u>ಪ್ರತಿವಾದಿ ಸಂಖ್ಯೆ:1 /</u>
<u>ಎದುರುದಾರರು</u> : ಶ್ರೀ.ಫಜಲ್ ಉಲ್ಲಾ ಖಾನ್,
ಬಿನ್ ಲೇಟ್ ರಷೀದ್ ಖಾನ್,
ವಯಸ್ಸು: 50 ವರ್ಷ,

ವಾಸ: ಹೊಂಗನೂರು ಗ್ರಾಮ,
ಹೊಂಗನೂರು ಅಂಚೆ,
ಕಸಬಾ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

(ಪ್ರತಿನಿಧಿಸುವವರು ಪ್ರತಿವಾದಿ-1 ರ ಪರವಾಗಿ
ಶ್ರೀ.ಎಂ.ಎಂ., ವಕೀಲರು)

<u>ವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ಆದೇಶ:</u>

ವಾದಿಗಳು ಮಧ್ಯಂತರ ಅರ್ಜಿ ಸಂ.2 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಸಲ್ಲಿಸಿ 1 ನೇ ಪ್ರತಿವಾದಿಯು ಅಥವಾ ಅವರ ವಾರಸುದಾರರು ಅಥವಾ ಬೇರೆ ಯಾರೂ ದಾವಾ ಸ್ವತ್ತಿನಲ್ಲಿ ದಾವೆ ಇತ್ಯರ್ಥವಾಗುವವರೆಗೆ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ನಿರ್ಭಂಧಿಸುವ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

2. <u>ವಾದಿಯರ ಮಧ್ಯಂತರ ಅರ್ಜಿಯ ಪ್ರಮಾಣ ಪತ್ರದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.</u>

ದಾವಾ ಸ್ವತ್ತು 1 ನೇ ವಾದಿಗೆ ಸೇರಿದ ಸ್ವಂತ ಆಸ್ತಿಯಾಗಿದ್ದು, 2 ನೇ ವಾದಿಯು ಸಹ ಹಕ್ಕುಳವರಾಗಿದ್ದು, ವಾದಿಗಳ ಹೆಸರಿಗೆ ಖಾತೆಯಿದ್ದು ದಾವಾ ಸ್ವತ್ತಿನಲ್ಲಿ ವಾದಿಗಳು ತಮ್ಮ ತಾಯಿ ಖರೀದಿ ಮಾಡಿದ ಕಾಲದಿಂದಲೂ ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಗಳು ಗ್ರಾಮ ಪಂಚಾಯಿತಿಗೆ ಕಂದಾಯವನ್ನು ಸಹ ಪಾವತಿಸುತ್ತಾ ಬಂದಿರುತ್ತಾರೆ. ದಾವಾ ಸ್ವತ್ತಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ವಾದಿಯರ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಪ್ರತಿವಾದಿಗಳು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತಾರೆ ಒಂದು ವೇಳೆ ಈ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗಳಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ ಈ ಅರ್ಜಿಯನ್ನು ಸಲ್ಲಿಸಿದ್ದು ಪುರಸ್ಕರಿತಸಬೇಕಾಗಿ ಕೋರಿರುತ್ತಾರೆ.

3. 1 ನೇ ಪ್ರತಿವಾದಿಯು ತನ್ನ ವಕೀಲರ ಮೂಲಕ ಹಾಜರಾಗಿ ಮೆಮೊ ಸಲ್ಲಿಸಿ ತಾನು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಈ ಮಧ್ಯಂತರ ಅರ್ಜಿಗೆ ತಕರಾರು ಎಂದು ಪರಿಗಣಿಸಬೇಕಾಗಿ ಕೋರಿರುತ್ತಾರೆ. ಆದ್ದರಿಂದ ಈ ನ್ಯಾಯಾಲಯವು 1 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಪರಿಶೀಲಿಸಿರುತ್ತದೆ 1 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಪತ್ರದಲ್ಲಿರುವ ಸಂಗತಿಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ ಈ ಪ್ರತಿವಾದಿಯು ಮುಂದುವರಿದು ಹೇಳಿರುವುದೇನೆಂದರೆ, 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನ ಖಾತಾ ನಂ.117ರ ಸ್ವತ್ತಿಗೆ ಹಳೆಯ ನಂಬರ್ 79 ಆಗಿರುತ್ತದೆ. ಸದರಿ ಸ್ವತ್ತು 1 ನೇ ಪ್ರತಿವಾದಿಯ ತಾತ ವಹಬ್ ಖಾನ್ ರವರ ಹೆಸರಿಗೆ ದಾಖಲಾಗಿರುತ್ತದೆ. ದಿನಾಂಕಃ21.02.1966ರಂದು ವಹಬ್ ಖಾನ್ ರವರು ಅವರ ಇಬ್ಬರು ಮಕ್ಕಳಿಗೆ ಎಲ್ಲಾ ಸ್ವತ್ತುಗಳನ್ನು ನೋಂದಾಯಿತ ವ್ಯವಸ್ಥಾ ಪತ್ರದ ಮೂಲಕ ವಿಭಾಗಮಾಡಿಕೊಟ್ಟಿರುತ್ತಾರೆ ಅದರಂತೆ ಖಾತೆ ನಂ.79ರ ಒಟ್ಟು ಸ್ವತ್ತನ್ನು ಎರಡು ಹಿಸ್ಸೆಗಳಾಗಿ ಮಾಡಿ ವ್ಯವಸ್ಥೆ ಮಾಡಿರುತ್ತಾರೆ. ಅದರಂತೆ ಸದರಿ ಸ್ವತ್ತಿನ ಉತ್ತರಾರ್ಧ ಭಾಗವನ್ನು 1 ನೇ ಪ್ರತಿವಾದಿಯ ತಂದೆಯು ಪಡೆದುಕೊಂಡು ಸ್ವಾಧೀನದಲ್ಲಿದ್ದರು. ಅದೇ ರೀತಿ ವಾದಿಯು ಸಹ ಅರ್ಧ ಭಾಗದಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. 1 ನೇ ಪ್ರತಿವಾದಿಯು ತಮ್ಮ ಹಿಸ್ಸೆಯಲ್ಲಿ ಮನೆ ಮತ್ತು ಖಾಲಿ ನಿವೇಶನ ಹೊಂದಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಜಂಟಿಯಾಗಿ ದಿನಾಂಕಃ04.12.2007ರಂದು 1 ನೇ ಪ್ರತಿವಾದಿಯ ಪರವಾಗಿ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಅದರಂತೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ. ಹಕ್ಕು ನಿವೃತ್ತಿ ಪತ್ರದಲ್ಲಿ ವ್ಯತ್ಯಾಸವಿದ್ದ ಕಾರಣ ದಿನಾಂಕಃ16.01.2020ರಲ್ಲಿ ಹಕ್ಕು ನಿವೃತ್ತಿ ಪತ್ರಕ್ಕೆ ತಿದ್ದುಪಡಿಯಾಗಿರುತ್ತದೆ ವಾದಿಯು ಸುಳ್ಳು ದಾಖಲೆಗಳನ್ನು ಸೃಷ್ಠಿಮಾಡಿ ಖಾತೆಮಾಡಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯು ದಿನಾಂಕಃ10.06.2008ರಂದು ಖಾನೆ ಸುಮಾರಿ ನಂ.117ರ ಮನೆಯನ್ನು ಭೋಗ್ಯ ಮಾಡಿರುತ್ತಾರೆ. ಅದರಂತೆ ಅಸಲು ದಾವಾ ಸಂಖ್ಯೆ:292/2021 ದಾವೆ ಚಾಲ್ತಿಯಲ್ಲಿರುತ್ತದೆ. ವಾದಿಯರು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಗಳ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

## ःಅಂಶಗಳುಃ

1. ಈ ದಾವೆಯನ್ನು ವಾದಿಗಳು ಮೇಲ್ನೋಟಕ್ಕೆ ತಮ್ಮ ಪರವಾಗಿ ಹೊಂದಿರುತ್ತಾರೆಯೇ?

2. ಅನುಕೂಲತೆಯ ಒಲವು ವಾದಿಗಳ ಪರವಾಗಿ ಇರುತ್ತದೆಯೇ?

3. ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದರೆ ವಾದಿಗಳಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ?

4. ಮಾಡುವ ಆದೇಶ ಏನು?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ1 ःಸಕಾರಾತ್ಮಕವಾಗಿ<br>
ಅಂಶ ಸಂಖ್ಯೆ2 ःಸಕಾರಾತ್ಮಕವಾಗಿ<br>
ಅಂಶ ಸಂಖ್ಯೆ3 ःಸಕಾರಾತ್ಮಕವಾಗಿ<br>
ಅಂಶ ಸಂಖ್ಯೆ3 ःಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,

## ಕಾರಣಗಳು

7. <u>ಅಂಶ ಸಂಖ್ಯೆ1 ರಿಂದ 3ः</u> ಈ ಮೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ವಿಷಯಗಳು ಒಂದೇ ಆಗಿರುವುದರಿಂದ ಈ ಮೂರು ಅಂಶಗಳನ್ನು ಚರ್ಚೆಗೆ ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

8. ವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಸ್ವತ್ತಿನಲ್ಲಿ ವಾದಿಗಳು ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ಸ್ವಾಧೀನಾನುಭವಕ್ಕೆ 1 ನೇ ಪ್ರತಿವಾದಿಯು ಹಸ್ತಕ್ಷೇಪಮಾಡಿರುತ್ತಾರೆ. ವಾದಿಯರು ತಮ್ಮ ಸ್ವಾಧೀನವನ್ನು ರುಜುವಾತುಪಡಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ ವಾದಿಗಳು ಸಲ್ಲಿಸಿರುವ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

9. ಇದಕ್ಕೆ ವ್ಯತಿರಿಕ್ತವಾಗಿ 1 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಸ್ವತ್ತಿನಲ್ಲಿ ವಾದಿಯರು ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ದಾಖಲೆಗಳನ್ನು ಸೃಷ್ಠಿಮಾಡಿಕೊಂಡು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆ. ಆದ್ದರಿಂದ ವಾದಿಗಳು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.

10. ವಾದಿಗಳು ಈ ಮಧ್ಯಂತರ ಅರ್ಜಿಯ ಜೊತೆಗೆ ಹಲವು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಅವುಗಳನ್ನು ಪರಿಶೀಲಿಸಿದಾಗ, ಖಾತಾ ನಕಲು, ದಿನಾಂಕಃ06.10.1955, 10.02.1956 ರ ಕ್ರಯಪತ್ರಗಳ ಜೆರಾಕ್ಸ್ ಪ್ರತಿಗಳು ದಿನಾಂಕಃ10.07.2001 ರ ಮರಣ ಶಾಸನದ ಜೆರಾಕ್ಸ್ ಪ್ರತಿ, ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳು ದಿನಾಂಕಃ21.02.1966 ರ ವ್ಯವಸ್ಥಾ ಪತ್ರದ ಜೆರಾಕ್ಸ್ ಪ್ರತಿ ದಿನಾಂಕಃ04.12.2007 ರ ಹಕ್ಕು ನಿವೃತ್ತಿ ಪತ್ರದ ಜೆರಾಕ್ಸ್ ಪ್ರತಿ ದಿನಾಂಕಃ16.01.2020 ರ ತಿದ್ದುಪಡಿ ಪತ್ರದ ಜೆರಾಕ್ಸ್ ಪ್ರತಿ ಮತ್ತು ವಂಶ ವೃಕ್ಷದ ಜೆರಾಕ್ಸ್ ಪ್ರತಿಯನ್ನುಪ್ರತಿಯನ್ನು ಹಾಜರುಪಡಿಸಿರುತ್ತಾರೆ.

11. 1 ನೇ ಪ್ರತಿವಾದಿಯು ದಾಖಲಾತಿಯ ಪಟ್ಟಿಯ ಜೊತೆಗೆ ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಿದಾಗ, ದಿನಾಂಕಃ 21.02.1966 ರ ವ್ಯವಸ್ಥಾ ಪತ್ರದ ಜೆರಾಕ್ಸ್ ಪ್ರತಿ ದಿನಾಂಕಃ04.12.2007 ರ ಹಕ್ಕು ನಿವೃತ್ತಿ ಪತ್ರದ ಜೆರಾಕ್ಸ್ ಪ್ರತಿ ಡಿಮ್ಯಾಂಡ್ ರಿಜಿಸ್ಟರ್ ಉತ್ತಾರಗಳು, ಕಂದಾಯ ಪಾವತಿ ರಶೀದಿಗಳು, ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಗ್ರಾಮ ಪಂಚಾಯಿತಿಯವರು ನೀಡಿದ ಹಿಂಬರಹ ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳ ಆದೇಶ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

12. ಈ ಹಂತದಲ್ಲಿ ದಾವೆಯ ಗುಣಾವಗುಣಗಳ ಬಗ್ಗೆ ಚರ್ಚಿಸಲು ಸಾಧ್ಯವಿರುವುದಿಲ್ಲ. ಕೇವಲ ವಾದಿಯರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ಮೇಲ್ನೋಟಕ್ಕೆ ರುಜುವಾತಾಗುತ್ತದೆಯೇ ಎಂಬ ಸಂಗತಿಯನ್ನು ನೋಡಬೇಕಾಗಿರುತ್ತದೆ. ವಾದಿಗಳ ಪ್ರಕಾರ 1 ನೇ ವಾದಿಯು ದಾವಾ ಸ್ವತ್ತನ್ನು ದಿನಾಂಕಃ06.10.1955 ರಂದು ಅಕ್ಬರ್ ಖಾನ್ ರವರ ಮಕ್ಕಳಿಂದ ಖರೀದಿ ಮಾಡಿದ್ದು ಅದರಂತೆ ಸ್ವಾಧೀನಾನುಭವದಲ್ಲಿರುತ್ತಾರೆ. ದಿನಾಂಕಃ10.07.2001 ರಂದು ವಾದಿಗಳಿಗೆ

ಮರಣ ಶಾಸನವಾಗಿರುತ್ತದೆ ಎಂಬುದು ವಾದಿಗಳ ದಾವೆಯಾಗಿರುತ್ತದೆ. ವಾದಿಗಳು ಹಾಜರುಪಡಿಸಿರುವ ದಾಖಲೆಗಳಿಂದ ಮೇಲ್ನೋಟಕ್ಕೆ ವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವ ಬಗ್ಗೆ ಸ್ಪಷ್ಟವಾಗುತ್ತದೆ. 1 ನೇ ಪ್ರತಿವಾದಿಯು ತಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ಮೇಲ್ನೋಟಕ್ಕೆ ಸ್ಪಷ್ಟಪಡಿಸುವ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈ ಹಂತದಲ್ಲಿ ದಾವಾ ಸ್ವತ್ತಿನಲ್ಲಿ ವಾದಿಯನ್ನು ಸ್ವಾಧೀನಾನುಭವದಲ್ಲಿರುವ ಬಗ್ಗೆ ಮೇಲ್ನೋಟಕ್ಕೆ ತಿಳಿದುಬರುತ್ತದೆ. ಈ ದಾವೆಯು ಮೇಲ್ನೋಟಕ್ಕೆ ವಾದಿಗಳ ಪರವಾಗಿ ಇರುವುದು ಮತ್ತು ಅನುಕೂಲತೆಯ ಒಲವು ವಾದಿಗಳ ಪರವಾಗಿ ಇರುವುದು ತಿಳಿದು ಬರುತ್ತದೆ. ಆದ್ದರಿಂದ ವಾದಿಗಳು ಸಲ್ಲಿಸಿರುವ ಈ ಅರ್ಜಿಯು ಪುರಸ್ಕಾರಗೊಳ್ಳಲು ಯೋಗ್ಯವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು ಅಂಶ ಸಂಖ್ಯೆ:**1** ರಿಂದ **3** ಅನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.

13. <u>ಅಂಶ ಸಂಖ್ಯೆ:4-</u> ಈ ಮೇಲ್ಕಂಡ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರಂತೆ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:**2** ನ್ನು ಪುರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

**1** ನೇ ಪ್ರತಿವಾದಿಯಾಗಲೀ, ಅಥವಾ ಬೇರೆ ಯಾರೇ ಆಗಲೀ ಈ ದಾವೆ ಇತ್ಯರ್ಥವಾಗುವವರೆಗೆ ದಾವಾ ಸ್ವತ್ತುಗಳಿಗೆ ಅತಿಕ್ರಮ ಪ್ರವೇಶ ಮಾಡದಂತೆ ವಾದಿಯ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವನ್ನು ನೀಡಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2023** ನೇ ಇಸವಿ ಫೆಬ್ರವರಿ **10** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

Sd/-
(ಮಹೇಂದ್ರ ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್? ಸಿ., ಚನ್ನಪಟ್ಟಣ.

<u>ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ</u>
<u>(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)</u>

<u>ಆದೇಶ</u>

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರಂತೆ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:**2** ನ್ನು ಪುರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಒಂದನೇ ಪ್ರತಿವಾದಿಯಾಗಲೀ, ಅಥವಾ ಬೇರೆ ಯಾರೇ ಆಗಲೀ ಈ ದಾವೆ ಇತ್ಯರ್ಥವಾಗುವವರೆಗೆ ದಾವಾ ಸ್ವತ್ತುಗಳಿಗೆ ಅತಿಕ್ರಮ ಪ್ರವೇಶ ಮಾಡದಂತೆ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಲಾಗಿದೆ.

**Sd/-**
(ಮಹೇಂದ್ರ ಎಂ.)
ಪ್ರಧಾನ ಸಿವಿಲ್?ನ್ಯಾಯಾಧೀಶರು
ಮತ್ತು ಜೆ.ಎಂ. ಎಫ್?ಸಿ., ಚನ್ನಪಟ್ಟಣ.